# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ:-123 ವಿಜಯನಗರ ಬೆಂಗಳೂರು.40

ಸಂ:ಸ.ಅ/ವಾರ್ಡ್ ಸಮಿತಿ/ /ಸಭೆ- /20-21 ದಿ:06.02.2021

### ವಿಜಯನಗರ ವಾರ್ಡ್ ಸಂಖ್ಯೆ:-123 ರ ವಾರ್ಡ್ ಸಮಿತಿ ಸಭೆ ನಡವಳಿಗಳು

ವಿಷಯ:- ಮಾನ್ಯ ಆಯುಕ್ತರು ಬಿಬಿಎಂಪಿ ರವರು ಆದೇಶ ಸಂಖ್ಯೆ:ಬಿ12(5) ಪಿ.ಆರ್/35/2020-21 ದಿ:05.12.2020 ರವರ ಆದೇಶದಂತೆ ದಿ:06.02.2021 ರಂದು ವಾರ್ಡ್ ಸಂಖ್ಯೆ:123 ರ ವಿಜಯನಗರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

### ಹಾಜರಿದ್ದ ಅಧಿಕಾರಿಗಳು

| ಕ್ರಸಂ | ಹೆಸರು | ಪದನಾಮ |
|---|---|---|
| 1. | ಶ್ರೀ. ಡಿ.ಕೆ ಬಾಬು | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿ. |
| 2. | ಶ್ರೀಮತಿ. ಸಂಗೀತ ಆರ್ | ಸದಸ್ಯ ಕಾರ್ಯದರ್ಶಿ ವಾರ್ಡ್ ಸಂಖ್ಯೆ: 123. |
| 3. | ಶ್ರೀ. ಆದಿನಾರಾಯಣ | ಹಿರಿಯ ಆರೋಗ್ಯ ಪರಿವೀಕ್ಷಕರು |
| 4. | ಶ್ರೀ ಹೇಮಂತ್ ಕುಮಾರ್ | ಸಹಾಯಕ ಆರೋಗ್ಯ ಪರಿವೀಕ್ಷಕರು. |
| 5. | ಶ್ರೀ. ಮಂಜು ಎಂ.ವಿ | Marshal |
| 6. | ಶ್ರೀಮತಿ. ಸುಮಿತ್ರ ಬಿ. ಎಸ್ | Assessor |
| 7. | ಶ್ರೀ.ಗಿರೀಶ್ | ಕಂದಾಯ ಅಧಿಕಾರಿಗಳು. |

ದಿನಾಂಕ: 06.02.2021 ರಂದು, ಸಮಯ 12.00 ಗಂಟೆಗೆ, ಸಭೆಯು ಪ್ರಾರಂಭವಾಯಿತು ಸಭೆಯಲ್ಲಿ ವಾರ್ಡ್ ಸಮಿತಿಯ ಅಧ್ಯಕ್ಷರಾದ ಶ್ರೀ.ಡಿ.ಕೆ ಬಾಬು ನೋಡಲ್ ಅಧಿಕಾರಿ ರವರು ಹಾಗೂ ಸಮಿತಿ ಸದಸ್ಯರು ಹಾಜರಾಗಿರುತ್ತಾರೆ.

ಶ್ರೀ.ಡಿ.ಕೆ.ಬಾಬು ರವರ ಅಧ್ಯಕ್ಷತೆಯಲ್ಲಿ ವಾರ್ಡಿನ ಕಾರ್ಯದರ್ಶಿಗಳಾದ ಶ್ರೀಮತಿ. ಸಂಗೀತ ಆರ್ ರವರು ಅಧ್ಯಕ್ಷರನ್ನೂ ಹಾಗೂ ಹಾಜರಿದ್ದ ಸದಸ್ಯರನ್ನು ಮತ್ತು ಸಿಬ್ಬಂದಿ ವರ್ಗದವರನ್ನೂ ಸ್ವಾಗತಿಸಿದರು.

1. GT Mall ಕಂದಾಯ ವಸೂಲಾತಿ ಬಗ್ಗೆ ಚರ್ಚಿಸಲಾಗಿ ಕಂದಾಯ ಪಾವತಿಯಾಗಿಲ್ಲದ ಕಾರಣ, ದಿ: 10.02.2021 ರಂದು ಕಂದಾಯ ಅಧಿಕಾರಿ, Assessor ಹಾಗೂ ಆರೋಗ್ಯ ಇಲಾಖೆಯ ಸಿಬ್ಬಂಧಿಯೊಂದಿಗೆ ನೋಡಲ್ ಅಧಿಕಾರಿ ಯವರು ಜಂಟಿಯಾಗಿ ಸ್ಥಳ ಪರಿವೀಕ್ಷಣೆ ನಡೆಸಲಾಗುವುದೆಂದು ತಿಳಿಸಿದರು.
2. Pot hole ಕಾಮಗಾರಿಯನ್ನು ಇನ್ನು ಉಳಿದ ರಸ್ತೆಗಳಲ್ಲಿ ಅಂದರೆ ವಿಜಯನಗರ 3ನೇ ಮುಖ್ಯರಸ್ತೆ, 4ನೇ ಮುಖ್ಯರಸ್ತೆಗಳಲ್ಲಿ ನಿರ್ವಹಿಸಲು ನೋಡಲ್ ಅಧಿಕಾರಿ ರವರು ಸೂಚಿಸಿದರು.
3. ಮಳೆ ನೀರು ಚರಂಡಿ ಬಳಿ ನಿರ್ಮಿಸಿರುವ Chain Link Fencing ಹಾಳಾಗಿರುವುದರಿಂದ ಮರಗಳ ತುಂಡುಗಳಿಂದ ಮುಚ್ಚಿಸಿರುವುದಾಗಿ ಆರೋಗ್ಯ ಇಲಾಖೆ ಅಧಿಕಾರಿಗಳು ಕಾರ್ಯದರ್ಶಿ ರವರಿಗೆ ತಿಳಿಸಿದರು.
4. ಘನ ತ್ಯಾಜ್ಯ ಹಾಗೂ ಕೋಳಿಯಿಂದ ಉತ್ಪತ್ತಿಯಾಗುವು ತ್ಯಾಜ್ಯಗಳು, ಅಂಗಡಿಯ ಮಾಲೀಕರು ಸಕ್ರಮವಾಗಿ ವಿಲೇವಾರಿ ಮಾಡದ ಕಾರಣ ಅಂಗಡಿ ಮಾಲೀಕರಿಗೆ ದಂಢ ವಿಧಿಸಲಾಗಿದೆ ಎಂದು ಆರೋಗ್ಯ ಅಧಿಕಾರಿಗಳು ಕಾರ್ಯದರ್ಶಿಯವರಿಗೆ ತಿಳಿಸಿದರು.
5. ದಿ: 13.02.2021 ರಂದು ಕಸ ಹಾಗೂ Debris ವಿಲೇವಾರಿ ಮಾಡಲು ಪರಿಸರ ಇಲಾಖೆ ಸಿಬ್ಬಂಧಿಯೊಂದಿಗೆ Gang work ನಿಯೋಜಿಸುವಂತೆ ನೋಡಲ್ ಅಧಿಕಾರಿಗಳು ಕಾರ್ಯದರ್ಶಿಗಳಿಗೆ ಸೂಚಿಸಿದರು.

6. Horticulture, SWD, BWSSB, BESCOM, Welfare Department, Traffic Police ಹಾಗೂ ಕಾನೂನು ಪೋಲಿಸ್ ಮುಂದಿನ ಸಭೆಯಲ್ಲಿ ಹಾಜರಿರುವಂತೆ ಪತ್ರ ಜಾರಿ ಮಾಡಲು ನೋಡಲ್ ಅಧಿಕಾರಿ ರವರು ಸೂಚಿಸಿದರು

ಮೇಲೆ ಸೂಚಿಸಿರುವ ಎಲ್ಲಾ ಆದೇಶಗಳನ್ನು ಪಾಲಿಸುವುದಾಗಿ ಕಾರ್ಯದರ್ಶಿ ರವರು ತಿಳಿಸಿದರು. ವಂದನಾರ್ಪಣೆಯನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

R Sangeeta
ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರು
ವಾರ್ಡ್ ಸಂ: 123 ವಿಜಯನಗರ.

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ